# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 72/2026

| | | | |
|---|---|---|---|
| ಸಿಡಬ್ಲ್ಯೂ | 4 | ಪಿಡಬ್ಲ್ಯೂ | 4 |

ಸಾಕ್ಷಿದಾರರ ಹೆಸರು : ಮಂಜಪ್ಪ

ತಂದೆಯ ಹೆಸರು : ದುರ್ಗಪ್ಪ

ವಯಸ್ಸು : 56 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 04.06.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಉದ್ಗಟ್ಟಿ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

8 ವರ್ಷದ ಹಿಂದೆ ಬೆಳಿಗ್ಗೆ 12.30 ಗಂಟೆಗೆ ದುರ್ಗಪ್ಪ ಹನುಮಮ್ಮ ಇಬ್ಬರೂ ಬಂದು ನನಗೆ ಹೊಡೆದರು. ರಾಮಣ್ಣ ಲಕ್ಷ್ಮಣ ಇಬ್ಬರೂ ಬಂದು ನನ್ನ ಬೆನ್ನಿಗೆ, ಕಾಲಿಗೆ ಹೊಡೆದರು. **(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ನನ್ನ ತಾಯಿಗೆ ಆರೋಪಿತರು ಎಲ್ಲರೂ ಸೇರಿ ನಿನ್ನದು ಏನು ಇದೆ ಅಂತಾ ಕೆಟ್ಟ ಕೆಟ್ಟದಾಗಿ ಬೈದರು ಎಂದರೆ ಸರಿ. ನನ್ನ ತಾಯಿಗೆ ಅಡ್ಡಗಟ್ಟಿ ಹಿಡಿದು ಎಳೆದಾಡಿ ನಾನು ಬಿಡಿಸಲು ಹೋದಾಗ ಅವರೆಲ್ಲರೂ ಸೇರಿ ನೂಕಾಡಿದರು ಎಂದರೆ ಸರಿ. ಕೃಷ್ಣಪ್ಪನನ್ನು ಕೆಳಗೆ ಬೀಳಿಸಿದರು ಎಂದರೆ ಸರಿ. ಮೊಲದಲ್ಲಿ ಇದ್ದ ಕಲ್ಲು ಮೋಣಕಾಲಿಗೆ ನೆಟ್ಟರು ಎಂದರೆ ಸರಿ. ಜೀವಬೆದರಿಕೆ ಹಾಕಿದರು ಈ ವಿಚಾರವಾಗಿ ನನ್ನ ತಾಯಿ ದೂರು ಕೊಟ್ಟರು ಎಂದರೆ ಸರಿ.

**ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಮಾಡಲು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.